ಓಎಸ್ 229/2011

ಪಿಡಬ್ಲ್ಯೂ 3

ದಿ : 07.12.2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

ಪಾಟೀ ಸವಾಲು : ಶ್ರೀ ಜಿಎಸ್ ಎಂ ವಕೀಲರಿಂದ

ದಾವಾ ಸ್ವತ್ತು ಯಾವ ಯಾವ ಸರ್ವೆ ನಂಬರ್ ನಲ್ಲಿ ಎಷ್ಟು ಎಷ್ಟು ವಿಸ್ತೀರ್ಣ ಇರುತ್ತದೆ ಎಂದರೆ ಸಾಕ್ಷಿಯು ಎರಡು ಸರ್ವೆ ನಂಬರ್ ಇರುತ್ತದೆ ಎಂದು ನುಡಿದು ಮುಂದುವರೆದು ಆದರೆ ಸರ್ವೆ ನಂಬರ್ ಗಳು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಎರಡು ಸರ್ವೆ ನಂಬರ್ ಗಳಲ್ಲಿ ಒಟ್ಟು ಎಷ್ಟು ವಿಸ್ತೀರ್ಣದ ಜಮೀನು ಇರುತ್ತದೆ ಎಂದರೆ 8 ಗುಂಟೆ , 8 ಗುಂಟೆ ಇರುತ್ತದೆ ಅದನ್ನು ಬಿಟ್ಟು ಬೇರೆ ವಿಚಾರ ಗೊತ್ತಿರುವುದಿಲ್ಲವೆಂದು ನುಡಿಯುತ್ತಾರೆ. ಮಹಾಲಿಂಗಶೆಟ್ಟಿ ಮತ್ತು ಅವರ ಅಣ್ಣತಮ್ಮಂದಿರಿಗೆ ಎಷ್ಟು ವಿಸ್ತೀರ್ಣದ ಆಸ್ತಿಗಳು ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ದಾವೆಯ ಸಂಪೂರ್ಣ ವಿಚಾರ ನಿಮಗೆ ತಿಳಿರುವುದಿಲ್ಲ ಎಂದರೆ ಸಾಕ್ಷಿಯು ದೇವಿರಮ್ಮ ಮಾತನಾಡುತ್ತಿದ್ದ ಬಗ್ಗೆ ಗೊತ್ತಿರುತ್ತದೆ. ದೇವಿರಮ್ಮ ರವರು ಯಾರ ಜೊತೆ ಮಾತನಾಡುತ್ತಾ ಇದ್ದರು ಎಂದರೆ ಸಾಕ್ಷಿಯು ನಾವು ಜಮೀನಿಗೆ ಹೋದಾಗ ನಮ್ಮ ಜೊತೆ ಮಾತನಾಡುತ್ತಿದ್ದರು ಎಂದು ನುಡಿಯುತ್ತಾರೆ.

ನನ್ನ ಪ್ರಮಾಣ ಪತ್ರದಲ್ಲಿ 8 ಗುಂಟೆ, 8 ಗುಂಟೆ ಬಗ್ಗೆ ಬರೆದಿರುವುದಿಲ್ಲ ಎಂದರೆ ಸರಿ. ದಾವಾ ವಿಷಯದ ಕುರಿತು ಯಾವುದೇ ವಿಚಾರಗಳು ಗೊತ್ತಿಲ್ಲದಿದ್ದರು 2 ನೇ ವಾದಿಯ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ